ಅನುಬಂಧ

ಜಿಲ್ಲಾವಾರು ಅಂಕಿ ಅಂಶ;

ಗುಲ್ಬರ್ಗಾ ವಿಭಾಗ

ಜಿಲ್ಲೆ	ಫಲಾನುಭವಿಗಳು
ಬಳ್ಳಾರಿ	967
ಬೀದರ್	753
ಗುಲ್ಬರ್ಗಾ	1106
ಯಾದಗಿರಿ	410
ಕೊಪ್ಪಳ	613
ರಾಯಚೂರು	553
ಮೊತ್ತ	**4402**

ಬೆಳಗಾಂ ವಿಭಾಗ

ಜಿಲ್ಲೆ	ಫಲಾನು ಭವಿಗಳು
ಬೆಳಗಾಂ	364
ಬಿಜಾಪುರ	2
ಬಾಗಲಕೋಟೆ	4
ಧಾರವಾಡ	3
ಗದಗ್	270
ಹಾವೇರಿ	2
ಉತ್ತರ ಕನ್ನಡ	2
ಮೊತ್ತ	**649**

ಅಂಗನವಾಡಿ ಮಕ್ಕಳ ಪೌಷ್ಟಿಕ ಆಹಾರ

141(357) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಅಂಗನವಾಡಿಗಳಲ್ಲಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಪೌಷ್ಟಿಕ ಆಹಾರವನ್ನು ಯಾವ ಕಂಪನಿಯ ಮುಖಾಂತರ ಒದಗಿಸಲಾಗುತ್ತಿದೆ;

2) ಪೌಷ್ಟಿಕ ಆಹಾರವನ್ನು ಒದಗಿಸಲು ಯಾವ ರೀತಿಯಲ್ಲಿ ಒದಗಿಸಬೇಕೆಂದು ನ್ಯಾಯಾಲಯದ ಆದೇಶವೇನಾದರೂ ಇದೆಯೆ; ಇದ್ದರೆ ಅದು ಯಾವ ರೀತಿಯಲ್ಲಿ ವಿತರಿಸಲು ಸಲಹೆ ನೀಡಲಾಗಿದೆ?

3) ಈಗ ಒದಗಿಸಲಾಗುತ್ತಿರುವ ಆಹಾರವು ಆರೋಗ್ಯಕ್ಕೆ ಹಾನಿಕರವಾಗಿದೆ ಎಂದು ವರದಿಯೇನಾದರೂ ಇದೆಯೆ;

ಶ್ರೀ ಸಿ. ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) 137 ಮಹಿಳಾ ಪೂರಕ ಪೌಷ್ಟಿಕ ಆಹಾರ ಘಟಕಗಳ ಮೂಲಕ ಪೌಷ್ಟಿಕ ಆಹಾರವನ್ನು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಫಲಾನುಭವಿಗಳಿಗೆ ಒದಗಿಸಲಾಗುತ್ತಿದೆ.

ಆ) ಹೌದು, ಸರ್ವೋಚ್ಚ ನ್ಯಾಯಾಲಯವು ದಿ: 04-10-2004ರ ಆದೇಶದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿಗಳಲ್ಲಿನ ಆಹಾರ ಸರಬರಾಜಿಗೆ ಗುತ್ತಿಗೆದಾರರನ್ನು ಬಳಸಬಾರದೆಂದು ಮತ್ತು ಆಹಾರ ಸಾಮಗ್ರಿಗಳನ್ನು ಖರೀದಿಸಲು ಮತ್ತು ಆಹಾರ ತಯಾರಿಸಲು ಗ್ರಾಮ ಸಮುದಾಯ, ಸ್ವಸಹಾಯ ಗುಂಪುಗಳು ಮತ್ತು ಮಹಿಳಾ ಮಂಡಳಿಗಳನ್ನು ಬಳಸಿಕೊಂಡು ಐ.ಸಿ.ಡಿ.ಎಸ್. ಹಣವನ್ನು ಉಪಯೋಗಿಸಿಕೊಳ್ಳಬೇಕೆಂದು ಆದೇಶವನ್ನು ನೀಡಿರುತ್ತದೆ.

ಇ) ಇಲ್ಲ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ರಚನೆ

143(394) ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ): ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಕ್ಕೆ ಅಧ್ಯಕ್ಷರ ಮತ್ತು ಸದಸ್ಯರುಗಳನ್ನು ನೇಮಕ ಮಾಡಲು ಸರ್ಕಾರ ಕ್ರಮ ಜರುಗಿಸುವುದೇ;

ಆ) ಹಿಂದುಳಿದ ವರ್ಗಗಳ ಅಭಿವೃದ್ಧಿ ಕುರಿತಾದ ಹಲವಾರು ಕಾರ್ಯಕ್ರಮಗಳು ಆಯೋಗದಿಂದ ಜರುಗಬೇಕಾಗಿರುವುದರಿಂದ ಕೂಡಲೇ ಆಯೋಗದ ಪುನರ್ ರಚನೆಗೆ ಸರ್ಕಾರ ಕ್ರಮ ಕೈಗೊಳ್ಳುವುದು;

ಇ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನಗಣತಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೀಸಲಾತಿ ಮುಂತಾದ ಪ್ರಮುಖ ನಿರ್ಧಾರಗಳು